ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆ

ಕರ್ನಾಟಕ ವಿಧಾನ ಪರಿಷತ್ತು

ನೂರ ನಲವತ್ತೆರಡನೆಯ ಅಧಿವೇಶನ

ಗುರುವಾರ, ದಿನಾಂಕ : 10 ನೇ ಡಿಸೆಂಬರ್, 2020

ವಿದ್ಯುಚ್ಛಕ್ತಿ ಉತ್ಪಾದನೆ ಮತ್ತು ಖರೀದಿ ಕುರಿತು

ಶ್ರೀ ಪಿ. ಆರ್. ರಮೇಶ್(ನಾಮನಿರ್ದೇಶನ ಹೊಂದಿದವರು) –

349 (441) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಕಳೆದ 3 ವರ್ಷಗಳಿಂದ ರಾಜ್ಯ ಸರ್ಕಾರದ ಅಧೀನದಲ್ಲಿರುವ ಮತ್ತು ಖಾಸಗಿ ವಿದ್ಯುಚ್ಛಕ್ತಿ ಉತ್ಪಾದನೆ ಸಂಸ್ಥೆಗಳಿಂದ ಒಟ್ಟು ಎಷ್ಟು ಸಾಮರ್ಥ್ಯದ ವಿದ್ಯುತ್ ಉತ್ಪಾದನೆ ಮಾಡಲಾಗುತ್ತಿದೆ; (ವರ್ಷವಾರು. ಸಂಸ್ಥೆವಾರು ವಿವರ ನೀಡುವುದು)

(ಆ) ಸೌರ ವಿದ್ಯುಚ್ಛಕ್ತಿ ಮತ್ತು ಇತರೆ ನವೀಕರಿಸಬಹುದಾದ ಮೂಲಗಳಿಂದ/ಸಂಸ್ಥೆಗಳಿಂದ ಒಟ್ಟು ಎಷ್ಟು ಸಾಮರ್ಥ್ಯದ ವಿದ್ಯುತ್ ಉತ್ಪಾದನೆ ಮಾಡಲಾಗುತ್ತಿದೆ; ಖಾಸಗಿ ಸಂಸ್ಥೆಗಳಿಗೆ ಪ್ರತಿ ಯುನಿಟ್‌ಗೆ ಪಾವತಿಸುವ ಖರೀದಿ ವೆಚ್ಚದ ಕುರಿತು ವಿವರ ನೀಡುವುದು;

(ಇ) ಅದಾನಿ ಸಂಸ್ಥೆಗೆ ಕಾರ್ಯಗಳ ಹಸ್ತಾಂತರವಾಗುವ ಮುನ್ನ ಉಡುಪಿ ಪವರ್ ಕಾರ್ಪೋರೇಷನ್ ಲಿಮಿಟೆಡ್ (UPCL) ಸಂಸ್ಥೆಯಲ್ಲಿ ಎಷ್ಟು ಸಾಮರ್ಥ್ಯದ ವಿದ್ಯುತ್ ಉತ್ಪಾದನೆ ಮಾಡಲಾಗುತ್ತಿತ್ತು; ಹಸ್ತಾಂತರವಾದ ನಂತರ ಎಷ್ಟು ಸಾಮರ್ಥ್ಯದ ವಿದ್ಯುತ್ ಉತ್ಪಾದನೆ ಮಾಡಲಾಗುತ್ತಿದೆ; (ವಿವರ ನೀಡುವುದು ಮತ್ತು ಹಸ್ತಾಂತರ ಮಾಡುವ ಒಪ್ಪಂದದ ಪ್ರತಿಯನ್ನು ಒದಗಿಸುವುದು)

(ಈ) ಅದಾನಿ ಸಂಸ್ಥೆಯಿಂದ ಉತ್ಪಾದಿತ ವಿದ್ಯುಚ್ಛಕ್ತಿಯನ್ನು ಸರ್ಕಾರ ಖರೀದಿ ಮಾಡುತ್ತಿದೆಯೇ; ಇದ್ದಲ್ಲಿ, ಪ್ರತಿ ಯುನಿಟ್‌ಗೆ ಪಾವತಿಸುವ ಖರೀದಿ ಮೊತ್ತ ಎಷ್ಟು; (ವಿವರ ನೀಡುವುದು)

(ಉ) ಅದಾನಿ ಸಂಸ್ಥೆಯ ಅಧೀನದಲ್ಲಿರುವ ಈ ಸಂಸ್ಥೆಯಲ್ಲಿ ವಿದ್ಯುಚ್ಛಕ್ತಿ ಉತ್ಪಾದನೆಯ ಸಾಮರ್ಥ್ಯ ಹೆಚ್ಚಿಸಲು ಯಾವುದಾದರೂ ಪ್ರಯತ್ನಗಳನ್ನು ಕೈಗೊಳ್ಳಗಿದೆಯೇ; ಕೈಗೊಂಡಿದ್ದಲ್ಲಿ, ವಿವರ ನೀಡುವುದು ಮತ್ತು ಈ ವಿಸ್ತರಣೆ ಸಂಬಂಧ ಯಾವುದಾದರೂ ಕೋರ್ಟ್‌ನಲ್ಲಿ ವ್ಯಾಜ್ಯ/ವಿವಾದಗಳು/ದಾವೆಗಳು ಹೂಡಲ್ಪಟ್ಟಿದೆಯೇ? (ಸಂಪೂರ್ಣ ವಿವರ ನೀಡುವುದು)